**<u>ದಿನಾಂಕ 02.04.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಬಿ ಆರ್ ಕೆ ವಕೀಲರಿಂದಃ</u>**

ದಾವಾಗೆ ಸಂಬಂದಪಟ್ಟಂತೆ 2 ಬ್ಯಾಂಕ್ ಲೆಕ್ಕ ಉತ್ತಾರಗಳನ್ನು ನಿಡಿ-1 ಮತ್ತು ನಿಡಿ-2 ಎಂದು, ಮರುಉತ್ತರವನ್ನು ನಿಡಿ-3 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ವಾದಿ ಪರ ಶ್ರೀ ಪಿ ಡಿ ಪಿ ವಕೀಲರಿಂದಃ</u>**

ನಾನು ಪಿಯುಸಿ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ವಾದಿ ನನಗೆ 2022ರಿಂದ ಪರಿಚಯ. ಇದಕ್ಕಿಂತ ಮೊದಲು ನಾನು ವಾದಿಯ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ. ವಾದಿಯು ನನಗೆ ನನ್ನ ಸ್ನೇಹಿತ ನಿತಿನ್ ರಾಜ್ ರವರ ಕಡೆಯಿಂದ ಪರಿಚಯ. ನಾನು ರಘುನಂದನ್ ರಾಮಣ್ಣ ರವರ ಮನೆ, ಜಮೀನು ಕೆಲಸ ಮಾಡುತ್ತಿದ್ದೇನೆ. ನನಗೆ ನಿವೇಶನ ಇದೆ. ಅದು ದಾವಾ ಆಸ್ತಿ ಎಂದರೆ ನಿಜ. ವಾದಿಯನ್ನು ಮೊದಲ ಬಾರಿಗೆ ನಾನು ದಿಃ22.08.2022 ರಂದು ನನ್ನ ತಂದೆಗೆ ಲಕ್ವ ಹೊಡೆದಿದ್ದಾಗ ನನ್ನ ಸ್ನೇಹಿತನಾದ ನಿತಿನ್ ರಾಜ್ ರವರ ಬಳಿ ಹಣ ಕೇಳಿದಾಗ ಅವರು ವಾದಿಯ ಬಳಿ ಕರೆದುಕೊಂಡು ಹೋಗಿ ನನಗೆ 3,40,000/- ಸಾಲ ಕೊಡಿಸಿರುತ್ತಾರೆ. ವಾದಿಯನ್ನು ಅದೇ ಮೊದಲ ಬಾರಿಗೆ ಭೇಟಿಯಾಗಿರುತ್ತೇನೆ. ಅದಾದ ನಂತರ ವಾದಿಯನ್ನು 3 ಸಲ ಬಾಂಡ್ ಪೇಪರ್ ವಿಚಾರವಾಗಿ ಭೇಟಿ ಮಾಡಿರುತ್ತೇನೆ. ಅದರ ದಿನಾಂಕಗಳು ದಿಃ28.08.2022, ದಿಃ04.01.2023 ಮತ್ತು ದಿಃ24.03.2023 ಆಗಿರುತ್ತದೆ. ಈ 3 ಸಲ ವಾದಿಯ ಮನೆಯಲ್ಲೇ ಅವರನ್ನು ಭೇಟಿಯಾಗಿರುತ್ತೇನೆ. ವಾದಿಯನ್ನು ಭೇಟಿಯಾದಾಗ ನಾನು, ವಾದಿ, ಮತ್ತು ಅವರ ಮಕ್ಕಳು ಇದ್ದರು. ಬೇರೆ ಯಾರು ಅವರ ಮನೆಯಲ್ಲಿ ಇರಲಿಲ್ಲ.

2. ವಾದಿ ನೋಟೀಸ್ ಕೊಟ್ಟ ದಿನಾಂಕ ನನಗೆ ನೆನಪಿಲ್ಲ. ವಾದಿ ಕೊಟ್ಟ ನೋಟೀಸ್ ನನಗೆ ತಲುಪಿದ ನಂತರ ನಾನು ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಾನು ಈ ದಿನ ಹಾಜರುಪಡಿಸಿರುವ ದಾಖಲೆಗಳನ್ನು ಲಿಖಿತ ಹೇಳಿಕೆ ಸಲ್ಲಿಸುವಾಗ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ನಾನು 2 ಸ್ಟಾಂಪ್ ಪೇಪರ್

ಗಳನ್ನು ಕೊಟ್ಟಿದ್ದೇನೆಂದು ನನ್ನ ಪ್ರತ್ಯುತ್ತರದಲ್ಲಿ ತಿಳಿಸಿರುತ್ತೇನೆ. ಆದರೆ ವಾಸ್ತವಾಗಿ 3 ಸ್ಟಾಂಪ್ ಪೇಪರ್ ಗಳನ್ನು ವಾದಿಗೆ ಕೊಟ್ಟಿದ್ದೇನೆ. ಎಲ್ಲಾ ಸ್ಟಾಂಪ್ ಪೇಪರ್ ಗಳನ್ನು ಖಾಲಿ ಕೊಟ್ಟಿದ್ದೇನೆಂದು ನೋಟೀಸ್ ನಲ್ಲಿ ತಿಳಿಸಿರುತ್ತೇನೆ. ನಿಪಿ-5 ರ ಕರಾರು ಪತ್ರದಲ್ಲಿರುವ ಬರವಣಿಗೆ ನನ್ನದಲ್ಲ. ನಿಪಿ-5 ರ ಕರಾರು ಪತ್ರದಲ್ಲಿ ನನ್ನ ಸಹಿ ಇದೆ. ನಿಪಿ-5 ರ ಕರಾರು ಪತ್ರದ 2 ನೇ ಪುಟದ ಮದ್ಯದಲ್ಲಿ ಮತ್ತು ಕೊನೆಯಲ್ಲಿ ನನ್ನ ಸಹಿಗಳು ಇವೆ. ನಿಪಿ-5 ರ ಕರಾರು ಪತ್ರದಲ್ಲಿ 7,00,000/- ತೆಗೆದುಕೊಂಡ ಬಗ್ಗೆ ಒಕ್ಕಣೆ ಇದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಬರೆದಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರ ಕರಾರು ಪತ್ರದಲ್ಲಿ ಬರೆದಿರುವ ಚೆಕ್ಕುಗಳ ಉಲ್ಲೇಖ ನನ್ನದೇ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-7,9,11 ರ ಚೆಕ್ಕುಗಳು ನನ್ನದೇ ಎಂದರೆ ನಿಜ. ಈ ಚೆಕ್ಕುಗಳ ಬಗ್ಗೆ ನಿಪಿ-5 ರ ಕರಾರು ಪತ್ರದಲ್ಲಿ ಉಲ್ಲೇಖ ಇದೆ ಎಂದರೆ ನಿಜ. ನಿಪಿ-5 ರ ಕರಾರು ಪತ್ರದ 2ನೇ ಪುಟದಲ್ಲಿ ದಿಃ19.10.2022 ರಂದು ಷರಾ ಇದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಬರೆದಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರ ಕರಾರು ಪತ್ರದ 2 ನೇ ಪುಟದಲ್ಲಿ 3,00,000/- ಹಣ ಪಡೆದು ಚೆಕ್ಕನ್ನು ನೀಡಿದ್ದೇನೆಂದು ಒಕ್ಕಣೆ ಇದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಬರೆದಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರ ಕರಾರು ಪತ್ರದ 2 ನೇ ಪುಟದಲ್ಲಿ ಮದ್ಯದಲ್ಲಿ ಮತ್ತು ಕೊನೆಯಲ್ಲಿ ನನ್ನ ಸಹಿ ಇದೆ ಎಂದರೆ ನಿಜ. ಅದರ ಮದ್ಯದಲ್ಲಿ ಒಕ್ಕಣೆ ಇದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಬರೆದಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರ ಕರಾರು ಪತ್ರವನ್ನು ನಾನೇ ಬರೆದು ಸಹಿ ಮಾಡಿರುತ್ತೇನೆಂದರೆ ಸುಳ್ಳು. ನಿಪಿ-5 ರ ಕರಾರು ಪತ್ರವನ್ನು ವೈಜ್ಞಾನಿಕ ಪ್ರಯೋಗಾಲಯಕ್ಕೆ ಕಳುಹಿಸಲು ನನ್ನದು ತೊಂದರೆ ಇಲ್ಲ.

3. ನಿಪಿ-6 ಕೈ ಸಾಲದ ಒಪ್ಪಂದ ಪತ್ರಕ್ಕೆ ನಾನು ಸಹಿಯನ್ನು ವಾದಿಯ ಮನೆಯಲ್ಲಿ ಅವರೇ ತಂದಿರುವ ಖಾಲಿ ಬಾಂಡ್ ಪೇಪರ್ ಗೆ ಮಾಡಿರುತ್ತೇನೆ. ನಿಪಿ-6 ಕೈ ಸಾಲದ ಒಪ್ಪಂದ ಪತ್ರದ ವಿಷಯಗಳನ್ನು ತಿಳಿದುಕೊಂಡಿರುತ್ತೇನೆ. ನಿಪಿ-6 ಕೈ ಸಾಲದ ಒಪ್ಪಂದ ಪತ್ರದಲ್ಲಿ ನನಗೆ ಸಂಬಂದಪಟ್ಟ ಚೆಕ್ಕುಗಳು ಮತ್ತು ಸಾಲದ ಬಗ್ಗೆ ನಮೂದು ಇದೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಖಾಲಿ ಬಾಂಡ್ ಪೇಪರ್ ಗೆ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ನಿಪಿ-6 ಕೈ ಸಾಲದ ಒಪ್ಪಂದ ಪತ್ರಕ್ಕೆ ವಾದಿ, ನಾನು, ಜಯಲಕ್ಷ್ಮಿ, ಡಿ ರಾಜೇಶ್ವರಿ ರವರುಗಳು ಸಹಿ ಮಾಡಿರುತ್ತಾರೆಂದರೆ ಸಾಕ್ಷಿಯು ನಾನು ಸಹಿ ಮಾಡಿದಾಗ ಬೇರೆಯವರದು ಸಹಿ

ಇರಲಿಲ್ಲ ಎಂದು ನುಡಿಯುತ್ತಾರೆ.

4. ನಿಪಿ-1 ಕ್ರಯದ ಕರಾರು ಪತ್ರದಲ್ಲಿ ದಾವಾ ಸ್ವತ್ತಿನ ವಿವರಗಳು ಮತ್ತು ನನಗೆ ಸಂಬಂದಪಟ್ಟ ಚೆಕ್ಕುಗಳ ಬಗ್ಗೆ ನಮೂದು ಇದೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಖಾಲಿ ಬಾಂಡ್ ಪೇಪರ್ ಗೆ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ನಾನು ವಾದಿಗೆ ದಾವಾ ಆಸ್ತಿಯ ಬಗ್ಗೆ ಮತ್ತು ಅದರ ಚೆಕ್ಕು ಬಂದಿಯ ಬಗ್ಗೆ ತಿಳಿಸಿಲ್ಲ. ನಿಪಿ-1 ಕ್ರಯದ ಕರಾರು ಪತ್ರದಲ್ಲಿ ದಾವಾ ಸ್ವತ್ತಿನ ವಿವರಗಳು ಮತ್ತು ಚೆಕ್ಕು ಬಂದಿಯ ವಿವರಗಳು ಸರಿಯಿಂದ ಎಂದರೆ ನಿಜ. ಸಾಕ್ಷಿ ಮುಂದುವರೆದು ಅದು ವಾದಿಗೆ ಹೇಗೆ ಗೊತ್ತಾಯಿತು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ವಿವರಗಳು ಮತ್ತು ದಾಖಲೆಗಳನ್ನು ನಾನು ವಾದಿಗೆ ವ್ಯಯಕ್ತಿಕವಾಗಿ ಅಥವಾ ವಾಟ್ಸ್ ಅಪ್ ಮೂಲಕ ತಿಳಿಸಿಲ್ಲ. ನಿಪಿ-1 ಕ್ರಯದ ಕರಾರು ಪತ್ರದಲ್ಲಿ ವಾದಿಯ ಸಹಿ ಇದ್ದು, ಅದರ ಕೆಳಗಡೆ ಕರಾರು ಕ್ರಯಕ್ಕೆ ಪಡೆಯುವವರ ಸಹಿ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ಸಹಿ ಮಾಡಿದಾಗ ವಾದಿಯ ಸಹಿ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ಕ್ರಯದ ಕರಾರು ಪತ್ರದಲ್ಲಿ ನನ್ನ ಸಹಿ ಇದ್ದು, ಅದರ ಕೆಳಗಡೆ ಕರಾರು ಕ್ರಯಕ್ಕೆ ಕೊಡುವವರ ಸಹಿ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ಸಹಿ ಮಾಡಿದಾಗ ಅದು ಇರಲಿಲ್ಲ ಎಂದು ನುಡಿಯುತ್ತಾರೆ.

5. ನಿಪಿ-6 ಕೈ ಸಾಲದ ಒಪ್ಪಂದ ಪತ್ರಕ್ಕೆ ನನ್ನ ಸಹಿ ಇದೆ ಎಂದರೆ ನಿಜ. **ಸದರಿ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.** ನಿಪಿ-6 ಕೈ ಸಾಲದ ಒಪ್ಪಂದ ಪತ್ರದಲ್ಲಿ ನನ್ನ ಸಹಿ ಇದ್ದು, ಅದರ ಕೆಳಗಡೆ 2ನೇ ಪಕ್ಷಗಾರರು ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ಸಹಿ ಮಾಡಿದಾಗ ಅದು ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ಕೈ ಸಾಲದ ಒಪ್ಪಂದ ಪತ್ರದಲ್ಲಿ ವಾದಿಯ ಸಹಿ ಇದ್ದು, ಅದರ ಕೆಳಗಡೆ ಮೊದಲನೇ ಪಕ್ಷಗಾರರು ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ಸಹಿ ಮಾಡಿದಾಗ ಅದು ಇರಲಿಲ್ಲ ಎಂದು ನುಡಿಯುತ್ತಾರೆ.

6. ನಿಡಿ-3 ಪ್ರತ್ಯುತ್ತರ ನಾನು ವಾದಿಗೆ ನೀಡಿರುತ್ತೇನೆ. ನಿಡಿ-3 ಪ್ರತ್ಯುತ್ತರದ ಪ್ಯಾರಾ 7 ರಲ್ಲಿ 8 ನೇ ಲೈನ್ ಅನ್ನು ಓದಲು ಹೇಳಿದಾಗ ಸಾಕ್ಷಿಯು ನನಗೆ ಆಂಗ್ಲ ಭಾಷೆ ಬರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಪಿಯುಸಿ ಯಲ್ಲಿ ಆಂಗ್ಲ ಭಾಷೆ ವಿಷಯ ಇತ್ತು ಎಂದರೆ ನಿಜ. ನಾನು 10 ನೇ ತರಗತಿಯಲ್ಲಿ ಆಂಗ್ಲ ಭಾಷೆಯನ್ನು ಪಾಸ್ ಮಾಡಿರುತ್ತೇನೆಂದರೆ ನಿಜ. ನಿಡಿ-3 ಪ್ರತ್ಯುತ್ತರದ ಪ್ಯಾರಾ 7

ರಲ್ಲಿ 9 ನೇ ಲೈನ್ ನಲ್ಲಿ ವಾದಿಯು 7 ಚೆಕ್ಕು ಮತ್ತು 2 ಬಾಂಡ್ ಪೇಪರ್ ಗಳನ್ನು ಆಗಸ್ಟ್ 2022 ರಲ್ಲಿ ಪಡೆದಿದ್ದಾರೆಂದು ತಿಳಿಸಿದ್ದೇನೆಂದರೆ ನಿಜ. ಸಾಕ್ಷಿ ಮುಂದುವರೆದು 7 ಚೆಕ್ಕುಗಳನ್ನು ಒಂದೇ ಸಲ ಮತ್ತು 3 ಬಾಂಡ್ ಪೇಪರ್ ಗಳನ್ನು ಪ್ರತ್ಯೇಕವಾಗಿ ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ಈ ವಿಷಯವನ್ನು ನಿಡಿ-3 ಪ್ರತ್ಯುತ್ತರದಲ್ಲಿ ತಿಳಿಸಲು ಮರೆತುಹೋಗಿದ್ದೆ. ಪ್ರಸ್ತುತ ವ್ಯವಹಾರ ಸೆಪ್ಟಂಬರ್ 2022 ರ ನಂತರ ಆಗಿದ್ದರಿಂದ ನಾನು ನಿಡಿ-3 ಪ್ರತ್ಯುತ್ತರದಲ್ಲಿ ತಿಳಿಸಿಲ್ಲ ಎಂದರೆ ಸುಳ್ಳು. 3,40,000/- ಹಣವನ್ನು ಒಂದೇ ಸಲ ಪಡೆದುಕೊಂಡಿರುತ್ತೇನೆ. ವಕೀಲರು ಪೋಟೋವನ್ನು ತೋರಿಸಿದಾಗ ಸಾಕ್ಷಿಯು ನಾನು ಇದ್ದೇನೆಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಶಾನೆ ಮಾಡಲು ವಕೀಲರು ತಿಳಿಸಿರುತ್ತಾರೆ. ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು **ನಿಪಿ-20 ಎಂದು ಗುರುತಿಸಲಾಯಿತು.** ವಕೀಲರು ಪೋಟೋವನ್ನು ತೋರಿಸಿದಾಗ ಸಾಕ್ಷಿಯು ನಾನು ಇದ್ದೇನೆಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಶಾನೆ ಮಾಡಲು ವಕೀಲರು ತಿಳಿಸಿರುತ್ತಾರೆ. ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು **ನಿಪಿ-21 ಎಂದು ಗುರುತಿಸಲಾಯಿತು.** ನಿಪಿ-20 ಮತ್ತು ನಿಪಿ-21 ಅನ್ನು ಒಂದೇ ಜಾಗದಲ್ಲಿ ತೆಗೆದಿದ್ದಾರೆಂದರೆ ಗೊತ್ತಿಲ್ಲ. ಎರಡೂ ಪೋಟೋಗಳಲ್ಲಿ ನಾನು ಹಣವನ್ನು ಎಣಿಸುತ್ತಿದ್ದೇನೆಂದರೆ ನಿಜ. ಸಾಕ್ಷಿ ಮುಂದುವರೆದು ನಮ್ಮ ವ್ಯವಹಾರಕ್ಕೂ ಮತ್ತು ಈ ಪೋಟೋಗಳಿಗೂ ಸಂಬಂದವಿಲ್ಲ ಎಂದು ನುಡಿಯುತ್ತಾರೆ. ನಿಪಿ-20 ರಲ್ಲಿ ಸ್ಟಾಂಪ್ ಪೇಪರ್ ಕಾಣಿಸುತ್ತಿದೆ ಎಂದರೆ ಸುಳ್ಳು. ನಿಪಿ-20 ಅನ್ನು ತೆಗೆದ ದಿವಸ ನಾನು ಸ್ಟಾಂಪ್ ಪೇಪರ್ ಅನ್ನು ತೆಗೆದುಕೊಂಡು ಬಂದಿರುತ್ತೇನೆಂದರೆ ಸುಳ್ಳು. ನಿಪಿ-21 ಅನ್ನು ತೆಗೆದ ದಿವಸ ನಾನು ಸ್ಟಾಂಪ್ ಪೇಪರ್ ಅನ್ನು ತೆಗೆದುಕೊಂಡು ಬಂದು ಅದೇ ದಿವಸ ಬರವಣಿಗೆ ಮಾಡಿ ಹಣ ಪಡೆದಿದ್ದೇನೆಂದರೆ ಸುಳ್ಳು. ನಿಪಿ-20 ಅನ್ನು ತೆಗೆದ ದಿವಸ ಸಾಕ್ಷಿಗಳ ಸಮಕ್ಷಮ ಹಣ ಪಡೆದು ನಿಪಿ-1 ಅನ್ನು ಮಾಡಿ ಅದಕ್ಕೆ ನಾನು ಸಹಿ ಮಾಡಿರುತ್ತೇನೆಂದರೆ ಸುಳ್ಳು. ನಿಪಿ-20 ಮತ್ತು ನಿಪಿ-21 ಎರಡೂ ಪೋಟೋಗಳನ್ನು ಎಲ್ಲಿ ತೆಗೆದಿದ್ದಾರೆಂದು ಗೊತ್ತಿಲ್ಲ. ನಾನು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದು ಕ್ರಯ ಪತ್ರವನ್ನು ಮಾಡಿಕೊಡುವ ಜವಬ್ದಾರಿಯಿಂದ ತಪ್ಪಿ ಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

7. ನಾನು ಖಾಲಿ ಸ್ಟಾಂಪ್ ಪೇಪರ್ ಮೇಲೆ ಸಹಿ ಮಾಡಿಕೊಡಬಾರದು ಎನ್ನುವ ಜ್ಞಾನ ಇದೆ ಎಂದರೆ ಸಾಕ್ಷಿಯು ನನ್ನ ತಂದೆಯನ್ನು ಉಳಿಸಿಕೊಳ್ಳಲು

ಹಣವದ ಅವಶ್ಯಕತೆ ಇದ್ದುದ್ದರಿಂದ ಖಾಲಿ ಪೇಪರ್ ಮೇಲೆ ವಾದಿ  ಕೇಳಿದ ಕಡೆ ಸಹಿ ಮಾಡಿಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಾನು ಖಾಲಿ ಬಾಂಡ್ ಪೇಪರ್ ಮೇಲೆ ದಿಃ28.08.2022 ರಂದು ಒಂದು ಪೇಪರ್ ಮೇಲೆ ಮಾಡಿಕೊಟ್ಟಿರುತ್ತೇನೆಂದು ನುಡಿಯುತ್ತಾರೆ.

8. ನಿಪಿ-5  ಒಪ್ಪಂದ ಪತ್ರದಲ್ಲಿ ನಾನು 2 ಬಾರಿ ಒಕ್ಕಣೆಗಳನ್ನು ಬರೆದ ನಂತರ ಸಹಿ ಮಾಡಿರುತ್ತೇನೆಂದರೆ ಸಾಕ್ಷಿಯು ವಾದಿ ಕೇಳಿದ ಕಡೆ ಸಹಿ ಮಾಡಿಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಸಹಿ ಮಾಡಿದ ಪತ್ರಗಳನ್ನು ವಾದಿಯು ಹರಿದು ಹಾಕಿ ಈ ಪ್ರಸ್ತುತ ದಾಖಲೆಗಳನ್ನು ತಂದಿದ್ದಾರೆಂದು ನುಡಿಯುತ್ತಾರೆ. ನಾನು ಸ್ವಇಚ್ಛೆಯಿಂದ ನಿಪಿ-5 ರಲ್ಲಿ ಸಹಿ ಮಾಡಿರುತ್ತೇನೆಂದರೆ ಸುಳ್ಳು.  ನಿಪಿ-5 ರ ಒಪ್ಪಂದ ಪತ್ರದಲ್ಲಿ ನನ್ನ ಸಹಿಗಳು ಇವೆ. **ಸದರಿ ಸಹಿಗಳನ್ನು ನಿಪಿ-5(ಎ) ಯಿಂದ ನಿಪಿ-5(ಸಿ) ಎಂದು ಗುರುತಿಸಲಾಯಿತು.** ನಿಪಿ-1,5 ಮತ್ತು 6 ಅನ್ನು ಮಾಡಿಕೊಡಲು ವಾದಿ ನನಗೆ ನೋಟೀಸ್  ಕೊಟ್ಟಿಲ್ಲ ಸಾಕ್ಷಿ ಮುಂದುವರೆದು ಫೋನ್ ಮುಖಾಂತರ ನನಗೆ ತಿಳಿಸಿರುತ್ತಾರೆ. ನಾನು ವಾದಿಗೆ ನೋಟೀಸ್ ನೀಡಿಲ್ಲ ಮತ್ತು ಠಾಣೆಗೆ ದೂರು ನೀಡಿಲ್ಲ. ನಿಪಿ-1,5 ಮತ್ತು 6 ಅನ್ನು ಮತ್ತು ಚೆಕ್ಕುಗಳನ್ನು ಹಿಂಪಡೆಯಲು ವಾದಿಗೆ ನೋಟೀಸ್ ಕೊಟ್ಟಿಲ್ಲ ಮತ್ತು ಠಾಣೆಗೆ ದೂರು ನೀಡಿಲ್ಲ.

9. ನನಗೆ ಜಯಲಕ್ಷ್ಮಿ ಪರಿಚಯವಿಲ್ಲ. ಜಯಲಕ್ಷ್ಮಿರವರು ದೂರು ನೀಡಿದ ಬಗ್ಗೆ ನಾನು ನನ್ನ ವಿರುದ್ದ ಸಾಕ್ಷಿ ನೀಡಲು ಬಂದಾಗ ತಿಳಿದುಕೊಂಡಿರುತ್ತೇನೆ. ನನ್ನ ಮೊಬೈಲ್ ಸಂಖ್ಯೆ 9620522484. ವಕೀಲರು ಸಾಕ್ಷಿಗೆ ವಾಟ್ಸ್ ಅಪ್ ಚಾಟ್ ಗಳನ್ನು ತೋರಿಸಿದಾಗ ಸಾಕ್ಷಿಯು ತಿರಸ್ಕರಿಸುತ್ತಾರೆ. ವಕೀಲರು ಸಾಕ್ಷಿಗೆ ದಾಖಲೆಯನ್ನು ತೋರಿಸಿದಾಗ ಸಾಕ್ಷಿಯು ಭೂ ಪರಿವರ್ತನೆ ಆದೇಶ ಎಂದು ಹೇಳುತ್ತಾರೆ. ಸದರಿ ದಾಖಲೆ ಜೆರಾಕ್ಸ್ ಪ್ರತಿಯಾಗಿದ್ದರಿಂದ ನಿಶಾನೆ ಮಾಡಲು ತಿರಸ್ಕರಿಸಲಾಯಿತು.  ಸದರಿ ದಾಖಲೆ ದಾವಾ ಆಸ್ತಿಗೆ ಸಂಬಂಪಟ್ಟಿದ್ದು ದಾವಾ ಆಸ್ತಿಯನ್ನು ವಾದಿಗೆ ಕೊಟ್ಟಿದ್ದೆ ಎಂದು ನುಡಿಯುತ್ತಾರೆ.

10. ವಕೀಲರು ಸಾಕ್ಷಿಗೆ ಕ್ರಯ ಪತ್ರದ ದಿನಾಂಕ 16.09.2010 ಅನ್ನು ತೋರಿಸಿದಾಗ ಸಾಕ್ಷಿಯು ದಾವಾ ಆಸ್ತಿಯನ್ನು ರೂಪರವರು ನನಗೆ ಮಾಡಿಕೊಟ್ಟಿದ್ದಾರೆಂದು  ಎಂದು ನುಡಿಯುತ್ತಾರೆ.ವಕೀಲರು ಸಾಕ್ಷಿಗೆ ದಾನ ಪತ್ರದ ದಿನಾಂಕ 26.10.2006 ಅನ್ನು  ತೋರಿಸಿದಾಗ ಸಾಕ್ಷಿಯು ದಾವಾ ಆಸ್ತಿಯನ್ನು

ರೂಪರವರಿಗೆ ಅವರ ತಂದೆ ಮಾಡಿಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ದಾನ ಪತ್ರ ಮತ್ತು ಕ್ರಯ ಪತ್ರವನ್ನು ನಾನು ವಾದಿಗೆ ಕೊಟ್ಟಿಲ್ಲ. ವಕೀಲರು ಸಾಕ್ಷಿಗೆ ನಕ್ಷೆಯನ್ನು ತೋರಿಸಿದಾಗ ಸಾಕ್ಷಿಯು ದಾವಾ ಆಸ್ತಿಗೆ ಸಂಬಂದಪಟ್ಟಿದ್ದು ಎಂದು ನುಡಿಯುತ್ತಾರೆ. ಸದರಿ ದಾಖಲೆ ಜೆರಾಕ್ಸ್ ಪ್ರತಿಯಾಗಿದ್ದರಿಂದ ನಿಶಾನೆ ಮಾಡಲು ತಿರಸ್ಕರಿಸಲಾಯಿತು. ದಿಃ18.11.2023 ರಂದು ವಾದಿಗೆ ಕ್ರಯ ಪತ್ರವನ್ನು ತಯಾರು ಮಾಡಲು ನಾನು ವಾಟ್ಸ್ ಅಪ್ ಮೂಲಕ ಒಟ್ಟು 12 ಪುಟಗಳ ದಾಖಲೆಗಳನ್ನು ಕಳುಹಿಸಿಕೊಟ್ಟಿರುತ್ತೇನೆಂದರೆ ನಿಜ. ಸಾಕ್ಷಿಯು ಮುಂದುವರೆದು ವಾದಿ ನನಗೆ ಹಣವನ್ನು ಪೀಡಿಸಿದಾಗ ನನ್ನ ಬಳಿ ದಾವಾ ಆಸ್ತಿ ಇದೆ, ಅದನ್ನು ಮಾರಿ ಹಣ ವಾಪಸ್ಸು ಕೊಡುತ್ತೇನೆಂದು ದಾಖಲೆಗಳನ್ನು ಕಳುಹಿಸಿಕೊಟ್ಟಿರುತ್ತೇನೆಂದು ತಿಳಿಸಿರುತ್ತಾರೆ.ಈ ವಿಷಯಗಳನ್ನು ನಿಡಿ-3 ಪ್ರತ್ಯುತ್ತರದಲ್ಲಿ ತಿಳಿಸಿರಲಿಲ್ಲಎಂದರೆ ಸಾಕ್ಷಿಯು ನನಗೆ ಮಾಹಿತಿ ಇರಲಿಲ್ಲ ಎಂದು ತಿಳಿಸುತ್ತಾರೆ. ದಿಃ11.02.2023, 14.02.2023, 12.03.2023, 20.03.2023, 22.03.2023, 25.03.2023, 28.03.2023,29.03.2023,02.04.2023,19.04.2023, 22.05.2023 ರಂದು ನಾನು ಜಯಲಕ್ಷ್ಮಿಯವರ ಜೊತೆ ಹಣಕಾಸಿನ ವ್ಯವಹಾರ ಮಾಡಿರುತ್ತೇನೆಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ನಾನು ವಾದಿಯನ್ನು ಹಣವನ್ನು ಕೇಳಿದಾಗ ಅವರು ಜಯಲಕ್ಷ್ಮಿರವರಿಗೆ ಹೇಳಿ ನನ್ನ ಖಾತೆಗೆ ಹಣವನ್ನು ಹಾಕುತ್ತಿದ್ದರು ಎಂದು ಹೇಳುತ್ತಾರೆ. ಈ ಹಣವನ್ನು ನಾನು ಜಯಲಕ್ಷ್ಮಿರವರಿಗೆ ನನ್ನ ಖಾತೆಯಿಂದ ಅವರ ಖಾತೆಗೆ ವಾದಿರವರ ಆದೇಶದ ಮೇರೆಗೆ ಜಮಾ ಮಾಡಿರುತ್ತೇನೆಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ನೋಟೀಸ್ ಗೆ ಪ್ರತ್ಯುತ್ತರ, ಲಿಖಿತ ಹೇಳಿಕೆ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ. ಸಾಕ್ಷಿ ಮುಂದುವರೆದು ಈ ವ್ಯವಹಾರಕ್ಕೂ ಮತ್ತು ಕೇಸಿಗೂ ಸಂಬಂದವಿಲ್ಲ ಎಂದು ನುಡಿಯುತ್ತಾರೆ. ನನಗೆ ಜಯಲಕ್ಷ್ಮಿರವರು ಪರಿಚುವಿದ್ದುದ್ದರಿಂದ ವ್ಯವಹಾರ ಮಾಡಿರುತ್ತೇನೆಂದರೆ ಸುಳ್ಳು. ಜಯಲಕ್ಷ್ಮಿರವರ ಜೊತೆ ಆದ ವ್ಯವಹಾರದ ಬಗ್ಗೆ ನನ್ನ ಬ್ಯಾಂಕ್ ಖಾತೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ನಿಜ.

11. ವಾದಿ ಒಡವೆಗಳನ್ನು ಅಡ ಇಟ್ಟಿದ ಬಗ್ಗೆ ನನಗೆ ಗೊತ್ತಿಲ್ಲ.ನಿಡಿ-1 ಮತ್ತು 2 ಅನ್ನು ನಾನು ವಾದಿಗೆ 16000/- ಬಡ್ಡಿ ಕೊಟ್ಟ ಬಗ್ಗೆ ಹಾಜರುಪಡಿಸಿರುತ್ತೇನೆ. ನಿಡಿ-2 ಅನ್ನು ವಾದಿಯು 60,000/- ಕೊಟ್ಟ ಬಗ್ಗೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗೆ ಸಂಬಂದಪಟ್ಟಂತೆ ವಾದಿ ಬಿಟ್ಟು

ಬೇರೆಯವರ ಜೊತೆ ವ್ಯವಹಾರ ಮಾಡಿರುತ್ತೇನೆ. ದಿಃ 07.12.2023 ರಂದು ದಾವಾ ಆಸ್ತಿಗೆ ಸಂಬಂದಪಟ್ಟಂತೆ ಪುಟ್ಟಸ್ವಾಮಿರವರ ಮಗ ರಿತೇಶ್ ರವರ ಜೊತೆ ಕರಾರು ಮಾಡಿಕೊಟ್ಟಿರುತ್ತೇನೆಂದರೆ ನಿಜ. ಸದರಿ ದಾಖಲೆ ಜೆರಾಕ್ಸ್ ಪ್ರತಿಯಾಗಿದ್ದರಿಂದ ನಿಶಾನೆ ಮಾಡಲು ತಿರಸ್ಕರಿಸಲಾಯಿತು. ಸದರಿ ಪತ್ರಕ್ಕೆ ನಾನು ಮತ್ತು ರಿತೇಶ್ ರವರು ಸಹಿ ಮಾಡಿರುತ್ತೇವೆ. ಸಾಕ್ಷಿದಾರರ ಸಮಕ್ಷಮ ನಾವು ಸಹಿ ಮಾಡಿರುತ್ತೇವೆ. ಸಾಕ್ಷಿದಾರರು ಸಹ ಸಹಿ ಮಾಡಿರುತ್ತಾರೆ. ಸದರಿ ದಾಖಲೆಯನ್ನು ಸಹ ನಾನು ವಾದಿಗೆ ಕಳುಹಿಸಿಕೊಟ್ಟಿರುತ್ತೇನೆಂದರೆ ನಿಜ. ಸದರಿ ದಾಖಲೆಯನ್ನು ನಾನು ವಾದಿಗೆ ಕಳುಹಿಸಿದ ದಿನಾಂಕ ನೆನಪಿಲ್ಲ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**